ಶಾಸಕರ ಮಾದರಿ ಶಾಲೆ

2412(3389); ಶ್ರೀ ಐಹೊಳೆ .ಡಿ. ಮಹಾಲಿಂಗಪ್ಪ (ರಾಯಬಾಗ)

ಅ) ಬೆಳಗಾವಿ ಜಿಲ್ಲೆ ಚಿಕ್ಕೋಡಿ ಶೈಕ್ಷಣಿಕ ವಿಭಾಗದಿಂದ ರಾಯಬಾಗ ಪಟ್ಟಣದಲ್ಲಿ ಕೇಂದ್ರ ಸರ್ಕಾರಿ ಶಾಲೆಯನ್ನು "ಶಾಸಕರ ಮಾದರಿ ಶಾಲೆ" ಎಂದು ಪರಿವರ್ತನೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಈ ಪ್ರಸ್ತಾವನೆ ಯಾವ ಹಂತದಲ್ಲಿದೆ;

ಇ) ರಾಯಬಾಗ ಪಟ್ಟಣದ ಕೇಂದ್ರ ಶಾಲೆಯನ್ನು ಶಾಸಕರ ಮಾದರಿ ಶಾಲೆಯೆಂದು ಪರಿವರ್ತನೆ ಮಾಡಲು ಸರ್ಕಾರಕ್ಕಿರುವ ಅಡೆತಡೆಗಳೇನು?

ಶ್ರೀ ಕಿಮ್ಮನೆ ರತ್ನಾಕರ್ (ಪ್ರಾಥಮಿಕ & ಪ್ರೌಢ ಶಿಕ್ಷಣ ಸಚಿವರು)

ಅ) ಹೌದು.

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಉದ್ಭವಿಸುವುದಿಲ್ಲ.

ಕುಡಿಯುವ ನೀರಿನ ಸಮಸ್ಯೆ

2413(3390); ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ (ರಾಯಬಾಗ)

ಅ) ಬೆಳಗಾವಿ ಜಿಲ್ಲೆ ರಾಯಭಾಗ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಕ್ಷೇತ್ರಾದ್ಯಂತ ನೀರಿನ ಸಮಸ್ಯೆ ನೀಗಿಸಲು ಸರ್ಕಾರ ಕೈಗೊಂಡ ಕ್ರಮವೇನು;

ಇ) 2014–15ನೇ ಸಾಲಿನಲ್ಲಿ ಅಯವ್ಯಯದಲ್ಲಿ ಕುಡಿಯುವ ನೀರಿಗಾಗಿ ಮೀಸಲಿಟ್ಟ ಅನುದಾನವೆಷ್ಟು;

ಈ) ಈ ಅನುದಾನದಲ್ಲಿ ಬೆಳಗಾವಿ ಜಿಲ್ಲೆಗೆ ಬಿಡುಗಡೆ ಮಾಡಿದ ಅನುದಾನ, ಕೈಗೊಂಡ ಯೋಜನೆ ಹಾಗೂ ಕಾಮಗಾರಿಗಳು ಯಾವುವು (ತಾಲ್ಲೂಕುವಾರು ಮತ್ತು ಯೋಜನೆವಾರು ವಿವರ ನೀಡುವುದು)?

ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಬಂದಿದೆ.

ಆ) ರಾಯಭಾಗ ತಾಲ್ಲೂಕಿನಲ್ಲಿ ಒಟ್ಟು 102 ಜನವಸತಿಗಳಿದ್ದು, 32 ಜನವಸತಿಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಕುಡಿಯುವ ನೀರನ್ನು ಪೂರೈಸಲಾಗುತ್ತಿದೆ. ಉಳಿದ 70 ಜನವಸತಿಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಅಭಿವೃದ್ಧಿಪಡಿಸಬೇಕಾಗಿದೆ.

ಸಮಸ್ಯಾತ್ಮಕ ಗ್ರಾಮಗಳಿಗೆ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ಕೃಷ್ಣಾ ನದಿ ಜಲಮೂಲ ಆಧರಿಸಿ 5 ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು ಕೈಗೊಳ್ಳಲಾಗಿದೆ. ಇವುಗಳಲ್ಲಿ ದಿಗ್ಗೇವಾಡಿ ಮತ್ತು ಇತರೆ 4 ಗ್ರಾಮಗಳ ಕು.ನೀ.ಸ.ಯೋ (ರೂ. 208 ಲಕ್ಷ) ಹಾಗೂ ಖೇಮಲಪುರ ಮತ್ತು ಇತರೆ 5 ಗ್ರಾಮಗಳ (ರೂ. 509.65 ಲಕ್ಷ) ಕುಡಿಯುವ ನೀರು ಸರಬರಾಜು ಯೋಜನೆಗಳು ಪೂರ್ಣಗೊಂಡಿವೆ. ಉಳಿದಂತೆ ಬೆಂಡವಾಡ ಮತ್ತು ಇತರೆ 9 ಗ್ರಾಮಗಳ ಕು.ನೀ.ಸ.ಯೋ (ರೂ. 1482.00 ಲಕ್ಷ), ಸುತ್ತಾಟ್ಟಿ ಮತ್ತು ಇತರೆ 3 ಗ್ರಾಮಗಳ ಕು.ನೀ.ಸ.ಯೋ. (ರೂ. 1006.00 ಲಕ್ಷ) ಹಾಗೂ ಪಾಲಬಾವಿ ಮತ್ತು ಇತರೆ 4 ಗ್ರಾಮಗಳ (ರೂ. 1900.00 ಲಕ್ಷ) ಕುಡಿಯುವ ನೀರು ಸರಬರಾಜು ಯೋಜನಾ ಕಾಮಗಾರಿಗಳು ಪ್ರಗತಿಯಲ್ಲಿವೆ.

ಇ) 2014–15ನೇ ಸಾಲಿನ ಆಯವ್ಯಯದಲ್ಲಿ ಬೆಳಗಾವಿ ಜಿಲ್ಲೆಗೆ ಕುಡಿಯುವ ನೀರಿಗಾಗಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಕಾರ್ಯಕ್ರಮದಡಿ ರೂ. 18156.42 ಲಕ್ಷ ಅಂದಾಜಿನ 4765 ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಇದರಲ್ಲಿ ರಾಯಭಾಗ ಮತಕ್ಷೇತ್ರದಲ್ಲಿ 684 ಕಾಮಗಾರಿಗಳನ್ನು ರೂ. 1385.42 ಲಕ್ಷ ಅನುದಾನದಲ್ಲಿ ಕೈಗೆತ್ತಿಕೊಳ್ಳಲಾಗಿದೆ.

ಈ) 2014–15ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲೆಗೆ ಬಿಡುಗಡೆ ಮಾಡಿದ ಅನುದಾನ, ಕೈಗೆತ್ತಿಕೊಂಡ ಯೋಜನೆಗಳು ಹಾಗೂ ಕಾಮಗಾರಿಗಳ ತಾಲ್ಲೂಕುವಾರು ವಿವರಗಳನ್ನು www.indiawater.gov.in ವೆಬ್‌ಸೈಟ್‌ನಲ್ಲಿ ಹಾಗೂ ಗಾಂಧಿ ಸಾಕ್ಷಿ ಕಾಯಕದಲ್ಲಿ ಸಾರ್ವಜನಿಕ ಮಾಹಿತಿಗಾಗಿ ಮುಕ್ತವಾಗಿ ಪ್ರತಿಬಿಂಬಿಸಿದೆ. ಜಿಲ್ಲೆಯ ತಾಲ್ಲೂಕುವಾರು ಅಂಕಿಅಂಶಗಳನ್ನು **ಅನುಬಂಧ**ದಲ್ಲಿ ಅಡಕ ಮಾಡಿದೆ.

ಅನುಬಂಧ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 3390ಕ್ಕೆ ಉತ್ತರಿಸಬೇಕಾದ

SL NO	HEAD OF A/C	SPILL		Fresh		Total	
		No of works	Grant for 2014-15	No of works	Grant for 2014-15	No of works	Grant for 2014-15
1	2	3	4	5	6	7	8
1	BELGAUM	294	1066.34	190	551.40	484	1617.74
2	KHANAPUR	194	786.16	145	700.53	339	1486.69
3	BAILHONGAL	99	1087.52	148	688.00	247	1775.52
4	SOUNDATTI	189	1365.32	196	903.91	385	2269.23
5	RAMADURG	234	854.20	182	825.96	416	1680.16
6	ATHANI	178	1411.15	195	613.20	373	2024.35
7	CHIKKODI	408	1625.57	233	643.46	641	2269.03
8	GOKAK	477	1696.52	194	348.67	671	2045.19
9	HUKKERI	253	1048.90	272	607.17	525	1656.07
10	RAIBAG	464	748.67	220	584.38	684	1333.05
	Grand Total	2790	11690	1975	6467	4765	18157